ನಿಮ್ಮೊಡನೆ

# ಬಾಯಿ ಚಪಲಕ್ಕೆ ಬಾಲ್ಯದಲ್ಲೇ ಮದ್ದು ಅಗತ್ಯ

ಮಹಿಳಾ ಸಾಮರ್ಥ್ಯವನ್ನು ಕಡಿಮೆ ಅಂದಾಜು ಮಾಡಿದವರಲ್ಲಿ ರಮೇಶ್‌ಕುಮಾರ್ ಹಾಗೂ ಭಾರತಿ ಮೊದಲಿಗರೂ ಅಲ್ಲ, ಕೊನೆಯವರಂತೂ ಅಲ್ಲವೇ ಅಲ್ಲ. ಚರ್ಚೆಗಳಲ್ಲಿ ಹೆಣ್ಣನ್ನು ಹೀನೋಪಮೆಯಾಗಿ ಬಳಸುವುದು ಸಾಮಾನ್ಯ. ಹಿಂದೊಮ್ಮೆ ಋತುಚಕ್ರ ನಿಂತ ಮಹಿಳೆಯರನ್ನು ಸಾಹಿತ್ಯ ಚರ್ಚೆಯ ಸಂದರ್ಭದಲ್ಲಿ ಉದಾಹರಣೆಯಾಗಿ ನೀಡಿದ ಲೇಖಕರ ವಿರುದ್ಧವೂ ಟೀಕೆ ಎದುರಾಗಿದ್ದವು.



ಈಶ್ವರ

‘ನನ್ನ ಸ್ಥಿತಿ ರೇಪ್ ಆದಂತಾಗಿದೆ’ ಎನ್ನುವ ವಿಧಾನಸಭಾಧ್ಯಕ್ಷ ಕೆ.ಆರ್. ರಮೇಶ್‌ಕುಮಾರ್ ಅವರ ಮಾತು ಸಹೃದಯರ ಸಿಟ್ಟು–ಬೇಸರಕ್ಕೆ ಕಾರಣವಾಗಿದೆ. ದೊಡ್ಡ ಹುದ್ದೆಯಲ್ಲಿರುವವರು ಲಘುವಾಗಿ ಮಾತನಾಡಿದಾಗ ಏರು ದನಿಯಲ್ಲಿ ಆಕ್ಷೇಪಗಳು ವ್ಯಕ್ತವಾಗುವುದು ಸಹಜ. ರಮೇಶ್‌ಕುಮಾರ್ ಅವರಂತೂ ರಾಜಕಾರಣದಲ್ಲಿ ಅಪರೂಪವಾದ ಸಭ್ಯತೆ–ಸಹೃದಯತೆಗೆ ಹೆಸರಾದವರು. ಇಂಥ ವ್ಯಕ್ತಿ ಯಾವ ಸಂದರ್ಭದಲ್ಲಾದರೂ ಸಂವೇದನಾರಹಿತವಾಗಿ ಮಾತನಾಡಿದರೆ ಅದನ್ನು ಒಪ್ಪಿಕೊಳ್ಳಲಾಗದು. ಶಾಸಕರ ಖರೀದಿಗೆ ಸಂಬಂಧಿಸಿದ್ದೆನ್ನಲಾದ ‘ಆಡಿಯೊ ಪ್ರಕರಣ’ದಲ್ಲಿ ತಮ್ಮ ಹೆಸರು ಪದೇ ಪದೇ ಪ್ರಸ್ತಾಪವಾದುದು ಅವರಿಗೆ ನೋವು ತರಿಸಿದೆ. ತಮ್ಮ ನೋವನ್ನು ಹೇಳಿಕೊಳ್ಳುವ ಉಮೇದಿನಲ್ಲಿ ತಿಳಿದೋ ತಿಳಿಯದೆಯೋ ತಮ್ಮನ್ನವರು ‘ರೇಪ್ ಸಂತ್ರಸ್ತೆ’ಗೆ ಹೋಲಿಸಿಕೊಂಡಿದ್ದಾರೆ. ಇದು ಅಸಂಗತ ಹೋಲಿಕೆಯಾದರೂ, ರಮೇಶ್‌ಕುಮಾರರ ಮಾತಿನ ಹಿನ್ನೆಲೆಯಲ್ಲಿ ನೆಪಕ್ಕಾದರೂ ಒಂದು ಕಾರಣವಿತ್ತು. ಆದರೆ, ಆ ಮಾತಿಗೆ ಸದನ ಗೊಳ್ಳೆಂದು ನಕ್ಕಿದ್ದರ ಹಿಂದೆ ಇದ್ದುದು ಅಭಿರುಚಿ ದಾರಿದ್ರ್ಯ ಹಾಗೂ ಸಂವೇದನಾರಾಹಿತ್ಯ. ಈ ಘಟನೆಯ ಆಸುಪಾಸಿನಲ್ಲೇ ಬಿಜೆಪಿಯ ಭಾರತಿ ಶೆಟ್ಟಿ ಅವರು ಆಡಿದ, ‘ಎಲ್ಲ ಸಂದರ್ಭದಲ್ಲೂ ಹೆಣ್ಣುಮಕ್ಕಳಿಗೆ ಸಮಾನತೆ ಬೇಕಿಲ್ಲ’ ಎಂಬರ್ಥದ ಮಾತುಗಳು ಕೂಡ ಹೆಣ್ಣುಮಕ್ಕಳನ್ನು ಸಾಂಪ್ರದಾಯಿಕ ಚೌಕಟ್ಟಿನಲ್ಲಿ ಕೂರಿಸುವ ಪ್ರಯತ್ನವೇ ಆಗಿದೆ. ‘ಶಬರಿಮಲೆಗೆ ಹೋಗದಿದ್ದರೆ ಮಹಿಳೆಯರಿಗೆ ನಷ್ಟವೇನೂ ಇಲ್ಲ’ ಎನ್ನುವ ಅವರ ಅಭಿಪ್ರಾಯದಲ್ಲಿ ‘ಮಹಿಳೆ–ಮೈಲಿಗೆ’ ಎನ್ನುವ ಧ್ವನಿಯೇ ಇದೆ. ಭಾರತಿ ಅವರ ತರ್ಕವನ್ನೇ ಮುಂದುವರಿಸುವುದಾದರೆ– ಶಬರಿಮಲೆ ಮಾತ್ರವೇನು, ಯಾವ ದೇವಸ್ಥಾನಕ್ಕೆ ಹೋಗದಿದ್ದರೂ ಮಹಿಳೆಯರಿಗೆ ನಷ್ಟವೇನೂ ಇಲ್ಲ.

ಹೆಣ್ಣಿನ ಘನತೆಗೆ ಕುಂದುಂಟಾಗುವಂತೆ ಮಾತನಾಡಿದವರಲ್ಲಿ, ಮಹಿಳಾ ಸಾಮರ್ಥ್ಯವನ್ನು ಕಡಿಮೆ ಅಂದಾಜು ಮಾಡಿದವರಲ್ಲಿ ರಮೇಶ್‌ಕುಮಾರ್ ಹಾಗೂ ಭಾರತಿ ಮೊದಲಿಗರೂ ಅಲ್ಲ, ಕೊನೆಯವರಂತೂ ಅಲ್ಲವೇ ಅಲ್ಲ. ಯಾವಯಾವುದೋ ಚರ್ಚೆಗಳಲ್ಲಿ ಹೆಣ್ಣನ್ನು ಹೀನೋಪಮೆಯಾಗಿ ಬಳಸುವುದು ಪುರುಷಪ್ರಧಾನ ಸಮಾಜದಲ್ಲಿ ಸಾಮಾನ್ಯ ಎನ್ನುವಂತಾಗಿಬಿಟ್ಟಿದೆ. ಕೆಲವು ವರ್ಷಗಳ ಹಿಂದೆ, ಋತುಚಕ್ರ ನಿಂತ ಮಹಿಳೆಯರನ್ನು ಸಾಹಿತ್ಯ ಚರ್ಚೆಯ ಸಂದರ್ಭದಲ್ಲಿ ಉದಾಹರಣೆಯಾಗಿ ನೀಡಿದ ಪ್ರಖ್ಯಾತ ಲೇಖಕರ ವಿರುದ್ಧ ಟೀಕೆಟಿಪ್ಪಣಿಗಳು ಎದುರಾಗಿದ್ದವು. ಲೇಖಕರೇ ಹೀಗೆ ಮಾತನಾಡಿದರೆ ಜನಸಾಮಾನ್ಯರ ಮಾತುಗಳಿಗೆ ಕಡಿವಾಣವಾದರೂ ಎಲ್ಲಿ?

ಗಂಡಸರ ನಡುವಿನ ಬೈಗುಳಗಳಲ್ಲಿ ಮಹಿಳೆಯರನ್ನು ಎಳೆದುತರಲಾಗುತ್ತದೆ. ಅಮ್ಮನ ಸೆರಗನ್ನೂ ದೌರ್ಬಲ್ಯದ ಸಂಕೇತವಾಗಿಸುತ್ತೇವೆ. ನಮಗೆ ಆಗದವರನ್ನು ವೇಶ್ಯೆಗಿಂತಲೂ ಕಡಿಮೆ ಎಂದು ನಿಂದಿಸುತ್ತೇವೆ. ಯಾರದ್ದಾದರೂ ಬಲಹೀನತೆಯನ್ನು ಆಡಿಕೊಳ್ಳಲು ಅರಿಶಿಣ ಕುಂಕುಮ ಕಳಿಸಬೇಕೆನ್ನುವುದು, ‘ಬಳೆ ತೊಟ್ಟುಕೊಳ್ಳಿ’, ‘ಸೀರೆ ಉಟ್ಟುಕೊಳ್ಳಿ’, ‘ಮೀಸೆ ಬೋಳಿಸಿ’ ಎಂದು ಛೇಡಿಸುವುದು ಸಾಮಾನ್ಯ. ಇಂಥ ಮಾತು–ಕೃತ್ಯಗಳ ಹಿಂದೆ ಹೆಣ್ಣನ್ನು ಅಬಲೆಯನ್ನಾಗಿ, ಕೀಳಾಗಿ ಕಾಣುವ ಮನೋಧರ್ಮವಿರುತ್ತದೆ. ಕೆಲವು ಸಂದರ್ಭಗಳಲ್ಲಿ ನಮಗರಿವಿಲ್ಲದೆಯೇ ಹೆಣ್ಣಿನ ಮನಸ್ಸನ್ನು ನೋಯಿಸುವ ಮಾತುಗಳನ್ನಾಡುತ್ತೇವೆ. ಕಿರುತೆರೆಯ ಕಾಮಿಡಿ ಷೋಗಳಲ್ಲಂತೂ ಹೆಣ್ಣಿನ ವೇಷಗಳಲ್ಲಿ ಗಂಡಸರು ನುಲಿಯುವುದು, ಅಂಗಾಂಗ ಪ್ರದರ್ಶನ ಮಾಡುವುದು ಇಂದಿನ ಜನಪ್ರಿಯ ಹಾಸ್ಯದ ಮಾದರಿಯಾಗಿಬಿಟ್ಟಿದೆ. ಗಟಾರದ ಈ ಹಾಸ್ಯಕ್ಕೆ ಮನೆಮಂದಿಯೆಲ್ಲ ಕೂತು ನೋಡುವಷ್ಟರ ಮಟ್ಟಿಗೆ ಒಗ್ಗಿಹೋಗಿದ್ದೇವೆ. ಧಾರಾವಾಹಿಗಳಲ್ಲಂತೂ ಅಳುಮುಂಜಿ ನಾಯಕಿಯರು, ಅಳಿಸುವ ಖಳನಾಯಕಿಯರು ಟಿಆರ್‌ಪಿ ಚೋದಕಗಳಾಗಿದ್ದಾರೆ. ನಮ್ಮ ಸಂವೇದನೆಗಳು ಜಡವೂ ಕುರೂಪವೂ ಆಗಿರುವುದಕ್ಕೆ ಉದಾಹರಣೆಗಳಂತೆ ಕಿರುತೆರೆಯ ಬಹುತೇಕ ಧಾರಾವಾಹಿ–ಷೋಗಳು ಕಾಣುತ್ತವೆ.

ರಮೇಶ್‌ಕುಮಾರ್ ಅವರ ಸಂವೇದನಾರಹಿತ ಮಾತಿಗೆ ವ್ಯಕ್ತವಾದ ಟೀಕೆಗಳು ನಮ್ಮ ಸಮಾಜದಲ್ಲಿನ್ನೂ ಸಂವೇದನೆ ಉಳಿದುಕೊಂಡಿರುವುದಕ್ಕೆ ಉದಾಹರಣೆ. ಆದರೆ, ನಮ್ಮ ಸಂವೇದನೆ ವಿರೋಧದ ರೂಪದಲ್ಲಿ ದಾಖಲಾದರಷ್ಟೇ ಸಾಕೆ? ನಿಜವಾಗಲೂ ಆಗಬೇಕಾಗಿರುವುದು, ನಮ್ಮ ಮಾತು–ಕೃತಿ ಎಚ್ಚರತಪ್ಪದಂತೆ ವಿವೇಕವನ್ನು ರೂಪಿಸುವ ಪ್ರಯತ್ನಗಳು. ದೊಡ್ಡವರನ್ನು ತಿದ್ದುವುದು ಆಗದ ಕೆಲಸ. ಎಳೆಯ ಮನಸ್ಸುಗಳು ಸ್ವಸ್ಥವಾಗಿರುವಂತೆ ನೋಡಿಕೊಳ್ಳುವುದು ಇಂದಿನ ಅಗತ್ಯ. ಇದು ಮನೆಯಲ್ಲೂ ಶಾಲೆಗಳಲ್ಲೂ ಆಗಬೇಕಾದ ಪ್ರಯತ್ನ. ಹೆಣ್ಣು–ಗಂಡು ಯಾರಿಗೆ ಯಾರೂ ಮೇಲಲ್ಲದ ಕೀಳಲ್ಲದ ಸಮಾನ ವ್ಯಕ್ತಿಗಳು ಎನ್ನುವ ಮನೋಭಾವವನ್ನು ಮಕ್ಕಳಲ್ಲಿ ಬೆಳೆಸಬೇಕು. ಮಗ–ಮಗಳ ನಡುವೆ ತಾರತಮ್ಯ ಮಾಡುವುದಂತೂ ಅಕ್ಷಮ್ಯ. ನಮ್ಮ ಪಠ್ಯಕ್ರಮಗಳು ಲಿಂಗ ತಾರತಮ್ಯವನ್ನು ವಿರೋಧಿಸುವ, ಸಮಾನತೆಯನ್ನು ಎತ್ತಿಹಿಡಿಯುವ ಮಾದರಿಗಳನ್ನು ಹೊಂದಿರಬೇಕು. ಮನೆ–ಶಾಲೆಗಳಲ್ಲಿ ದೊರೆಯುವ ಸಮಾನತೆ ಮತ್ತು ಸೌಹಾರ್ದದ ಶಿಕ್ಷಣ ಸಮಾಜದ ಆರೋಗ್ಯಕ್ಕೆ ಅತ್ಯಗತ್ಯ.

■ ರಘುನಾಥ ಚ.ಹ.